**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಅಸಲು ದಾವೆ. ಸಂಖ್ಯೆ:220/2024**

ಪಿ.ಡಬ್ಲೂ:01 ಶ್ರೀ ಶಂಶೀರ್

**ಸಾಕ್ಷಿಯನ್ನು ದಿನಾಂಕಃ 01-07-2025 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲು ಃ ಪ್ರತಿವಾದಿಗಳ ಪರ ಶ್ರೀ.ಆರ್ ಆರ್ ಜಿ ವಕೀಲರಿಂದ**

1. ನಾನು ಜಮೀನು ನಮ್ಮದು ಎಂದು ಹೇಳಿ ಈ ದಾವೆಯನ್ನು ಹೂಡಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂ.84 ಆಗಿರುತ್ತದೆ. ಸದರಿ ಆಸ್ತಿಯ ವಿಸ್ತೀರ್ಣವು 4 ಎಕರೆ 9 ಗುಂಟೆ ಆಗಿರುತ್ತದೆ. ಸದರಿ ಆಸ್ತಿಯು ಮೂಲತಃ ರಾಘವೇಂದ್ರರಾವ್ ರವರಿಗೆ ಸೇರಿರುತ್ತದೆ. ದಾವಾ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿದ್ದು ಪೂರ್ವಕ್ಕೆ ಬಂಡೆ, ಪಶ್ಚಿಮಕ್ಕೆ ಅಬ್ದುಲ್ ಜೆಬ್ಬಾರ್ ರವರ ಆಸ್ತಿ, ಉತ್ತರಕ್ಕೆ ನಮ್ಮ ಸ್ವಂತ ಜಮೀನು, ದಕ್ಷಿಣಕ್ಕೆ ಅಬ್ದುಲ್ ಜಬ್ಬಾರ್ ರವರ ಆಸ್ತಿ ಇರುತ್ತದೆ. ಮೂಲತಃ ದಾವಾ ಆಸ್ತಿಯು ಬುಜಂಗ್ ರಾವ್ ರವರ ಸ್ವಾದೀನದಲ್ಲಿದ್ದು ಅವರಿಂದ ಅವರ ಮಗನಾದ ರಾಘವೇಂದ್ರ ರಾವ್ ರವರಿಗೆ ಸ್ವಾದೀನ ಬಂದಿದ್ದು ನಂತರ ನಾವು ಸದರಿ ರಾಘವೇಂದ್ರ ರಾವ್ ರಿಂದ ಅದನ್ನು ಖರೀದಿ ಮಾಡಿರುತ್ತೇವೆ. ನನ್ನ ಪ್ರಕಾರ ಸದರಿ ಬುಜಂಗರಾವ್ ಮತ್ತು ರಾಘವೇಂದ್ರ ರಾವ್ ದಾವಾ ಆಸ್ತಿಯ ಸ್ವಾದೀನದಲ್ಲಿ ಇದ್ದ ಬಗ್ಗೆ ತೋರಿಸಲು ನಾನು ಇಲ್ಲಿಯವರೆಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೇನಾ ಎಂದರೆ ಇಲ್ಲ. ಸದರಿ ಭುಜಂಗರಾವ್ ಮತ್ತು ರಾಘವೆಂದ್ರ ರಾವ್ ರವರು ಬೆಟ್ಟೂಗ್ಗರು ಗ್ರಾಮದಲ್ಲಿ ಇದ್ದು ನಂತರ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದರು.

2. ಸದರಿ ಭುಜಂಗರಾವ್ ಮತ್ತು ರಾಘವೆಂದ್ರ ರಾವ್ ರವರು ಬೆಂಗಳೂರಿನನಲ್ಲಿ ಸುಮಾರು 50 ವರ್ಷಗಳಿಂದ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಭುಜಂಗರಾವ್‌ರವರು ಜೋಡಿದಾರರು ಎಂದರೆ ಸರಿ. ಸದರಿ ಭುಜಂಗರಾವ್‌ರವರ ಆಸ್ತಿಯನ್ನು ಪ್ರತಿವಾದಿಗಳ ತಾತನವರಾದ ಗಂಗನಬೋವಿ ರವರು ಗೇಣಿಗೆ ತೆಗೆದುಕೊಂಡು ಅದರಲ್ಲಿ ಕೃಷಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಂತರ ಸದರಿ ದಾವಾ ಆಸ್ತಿಯಲ್ಲಿ ಗಂಗನಬೋವಿ ರವರ ಮಗನಾದ ಪೆದ್ದಣ್ಣ ಬೋವಿ ಕೂಡ ಗೇಣಿಗೆ ಪಡೆದುಕೊಂಡು ಕೃಷಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಗಳು ಪೆದ್ದಣ್ಣ ಬೋವಿರವರ ಮಕ್ಕಳು ಮತ್ತು ಮೊಮ್ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಈಗ ದಾವಾ ಆಸ್ತಿಯಲ್ಲಿ ಪೆದ್ದಣ್ಣ ಬೋವಿರವರ ನಂತರ ಪ್ರತಿವಾದಿಗಳು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ಪೆದ್ದಣ್ಣ ಬೋವಿರವರ ಮರಣಾ ನಂತರ ಅವರ ಹೆಂಡತಿ ಆದ ಮುನಿಯಮ್ಮ ಮತ್ತು ಮಕ್ಕಳು ದಾವಾ ಆಸ್ತಿಯ ಸ್ವಾದೀನತೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಪೆದ್ದಣ್ಣ ಬೋವಿರವರು ತಮ್ಮ ಜೀವಿತಾ ಕಾಲದಲ್ಲಿ ಗೇಣಿಗೆ ಸಂಬಂದ ಪಟ್ಟಂತೆ ಮಂಜೂರು ಮಾಡಲು ಅರ್ಜಿಯನ್ನು ಸಂಬಂದ ಪಟ್ಟ ಕಛೇರಿಗೆ ನೀಡಿದ್ದರೂ ಎಂದರೆ ಸರಿಯಲ್ಲ. ಸದರಿ ಅರ್ಜಿಗೆ ಸಂಬಂದ ಪಟ್ಟಂತೆ ಬಂಗಾರ ಪೇಟೆಯ ತಹಸೀಲ್ದಾರ್ ರವರು ಒಂದು ಪ್ರಕರಣವನ್ನು ಲ್ಯಾಂಡ್ ಟ್ರಿಬುನಲ್ ನಲ್ಲಿ ದಾಖಲಿಸಿ ಸದರಿ ಭುಜಂಗರಾವ್ ಗೂ ಮತ್ತು ಪೆದ್ದಣ್ಣ ಬೋವಿರವರಿಗೆ ಒಂದು ನೋಟೀಸನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ದಾಖಲೆಗಳನ್ನು ಸೃಷ್ಟಿಸಿರುತ್ತಾರೆ ಎನ್ನುತ್ತಾರೆ. ಸದರಿ ಅರ್ಜಿಗೆ ಸಂಬಂದ ಪಟ್ಟಂತೆ ಪ್ರಕರಣವು 1181/1976 ಎಂಬ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಅವರು ಆ ರೀತಿ ದಾಖಲೆ ಸೃಷ್ಟಿಸಿರುತ್ತಾರೆ ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ಗಂಗನಬೋವಿ ಮತ್ತು ರಾಘವೇಂದ್ರ ರಾವ್ ರವರು ಹಾಜರಾಗಿ ಆ ಪ್ರಕರಣದ ಆರ್ಡರ್ ಶೀಟುಗಳಿಗೆ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರು ತಪ್ಪಾಗಿ ಸಹಿ ಮಾಡಿರುತ್ತಾರೆ ಎನ್ನುತ್ತಾರೆ.

4. ಸದರಿ ರಾಘವೇಂದ್ರ ರಾವ್ ರವರು ದಾವಾ ಆಸ್ತಿಯಲ್ಲಿ ಗಂಗನಬೋವಿ ರವರು ಗೇಣಿ ಮಾಡುತ್ತಿರುವುದನ್ನು ಒಪ್ಪಿಕೊಂಡು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲಾದ ಪ್ರಕರಣವು ಮುಂದುವರೆದು ಅದನ್ನು ಮನ್ನಿಸಿ ನಂತರ ಗಂಗನಬೋವಿ ರವರಿಗೆ ದಾವಾ ಆಸ್ತಿಯನ್ನು ಮಂಜೂರು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ರಾಘವೇಂದ್ರ ರಾವ್ ರವರು ಹಾಜರಿದ್ದು ಅವರ ಹೇಳಿಕೆಗೆ ಖುದ್ದು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಾವಾ ಆಸ್ತಿಯಲ್ಲಿ ಸರ್ವೆ ಕಾರ್ಯವನ್ನು ಮಾಡಿದ್ದು ಆಗ ಅಲ್ಲಿ ರಾಘವೇಂದ್ರ ರಾವ್ ಮತ್ತು ಗಂಗನಬೋವಿ ರವರು ಹಾಜರಿದ್ದು ಸದರಿ ಸರ್ವೆ ದಾಖಲೆಗಳಿಗೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸರ್ವೆಯವರ್ ರವರು ಸ್ಥಳ ಪರಿಶೀಲನೆ ಮಾಡಿ ದಾವಾ ಆಸ್ತಿಯನ್ನು ಪೆದ್ದಣ್ಣ ಬೋವಿರವರೇ ಗೇಣಿ ಮಾಡುತ್ತಿದ್ದಾರೆ ಎಂದು ದೃಡೀಕರಿಸಿ ವರದಿ ನೀಡಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸರ್ವೆಯರ್ ನಂತರ ಅವರ ವರದಿಯನ್ನು ತಹಸೀಲ್ದಾರ್ ರವರಿಗೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ತಹಸೀಲ್ದಾರ್ ರವರು ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಗಂಗನಬೋವಿರವರ ಹೆಸರಿನಲ್ಲಿ ಮುಟೆಲಷನ್ ಮತ್ತು ಪಹಣಿಯನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ.

5. ಸದರಿ ದಾವಾ ಆಸ್ತಿ ಆದ ಸರ್ವೆ ನಂ.84 ರ 4 ಎಕರೆ 5 ಗುಂಟೆಯಲ್ಲಿ ಸದರಿ ಗಂಗನಬೋವಿರವರ ಹೆಸರಿನಲ್ಲಿ 3 ಎಕರೆ 10 ಗುಂಟೆಯನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ 3 ಎಕರೆ 10 ಗುಂಟೆ ಆಸ್ತಿಯು ಸದರಿ ಗಂಗನಬೋವಿರವರಿಂದ ಪ್ರತಿವಾದಿಗಳು ಈಗಲೂ ಸಹ ಸ್ವಾದೀನತೆಯನ್ನು ಹೊಂದಿರುತ್ತಾರೆ ಎಂದು ಕಂದಾಯ ದಾಖಲೆಗಳು ತೋರಿಸುತ್ತದೆ ಎಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದಂತೆ ದಾವಾ ಆಸ್ತಿಯ ಸರ್ವೆಗೆ ಬಂದಿದ್ದ ಸಂದರ್ಬದಲ್ಲಿ ರಾಘವೇಂದ್ರ ರಾವ್ ರವರು ಅಲ್ಲಿ ಹಾಜರಿದ್ದು ದಾವಾ ಆಸ್ತಿಯನ್ನು ಗಂಗನಬೋವಿರವರು ಗೇಣಿ ಮಾಡುವ ಬಗ್ಗೆ ಹೇಳಿ ತಮ್ಮ ಸಹಿಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ರೆವಿನ್ಯೂ ಇನ್ಸ್ ಪೆಕ್ಟರ್ ಮಾಡಿದ ವರದಿಯಲ್ಲಿ ರಾಘವೇಂದ್ರ ರಾವ್ ರವರು ಪೆದ್ದಣ್ಣ ಬೋವಿರವರು ದಾವಾ ಆಸ್ತಿಯನ್ನು 30 ವರ್ಷಗಳಿಂದ ಸ್ವಾದೀನತೆಯಲ್ಲಿ ಇರುವ ಬಗ್ಗೆ ಒಪ್ಪಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ರಾಘವೇಂದ್ರ ರಾವ್ ರವರು ಸದರಿ ವಿಚಾರಕ್ಕೆ ಸಂಬಂದ ಪಟ್ಟಂತೆ ಸಹಿ ಕೂಡ ದಾಖಲೆಗೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

6. ಸದರಿ ಲ್ಯಾಂಡ್ ಟ್ರಿಬುನಲ್ ನ ಆದೇಶದಂತೆ ವಿಶೇಷ ತಹಸೀಲ್ದಾರ್ ರವರು ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಪೆದ್ದಣ್ಣ ಬೋವಿ ರವರಿಗೆ 956 ಮೊತ್ತವನ್ನು ಲೇವಣಿ ಮಾಡಲು ಮತ್ತು ಪೋಡಿಗೆ ಸಂಬಂದ ಪಟ್ಟಂತೆ 964 ಮೊತ್ತವನ್ನು 15 ದಿನಗಳ ಒಳಗಡೆ ಕಟ್ಟಬೇಕು ಎಂದು ಕೂಡ ಹೇಳಿರುತ್ತಾರೆ ಎಂದರೆ ಸುಳ್ಳು, ಸದರಿ ಹಣವನ್ನು ನಿಗದಿತ ಸಮಯದ ಒಳಗಡೆ ಪೆದ್ದಣ್ಣ ಬೋವಿರವರು ವಿಶೇಷ ತಹಸೀಲ್ದಾರ್ ರವರ ಆದೇಶದಂತೆ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿಬಂದನೆಗಳನ್ನು ಪೆದ್ದಣ್ಣ ಬೋವಿರವರು ಸರಿಯಾಗಿ ಮಾಡಿದ ಕಾರಣ ದಿಃ13.11.1985 ರಂದು ದಾವಾ ಆಸ್ತಿಯನ್ನು ಪೆದ್ದಣ್ಣ ಬೋವಿರವರ ಹೆಸರಿಗೆ ಮಂಜೂರು ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಅವರು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ನಿಬಂದನೆಗಳನ್ನು ಪೂರೈಸಿದ ನಂತರ ವಿಶೇಷ ತಹಸೀಲ್ದಾರ್ ರವರು ಸರ್ವೆ ನಂ.84 ರ 3 ಎಕರೆ 10 ಗುಂಟೆ ಆಸ್ತಿಯನ್ನು ಪೆದ್ದಣ್ಣ ಬೋವಿರವರ ಹೆಸರಿಗೆ ಖಾತೆ ಮಾಡುವಂತೆ ಆದೇಶ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ವಿಶೇಷ ತಿಹಸೀಲ್ದಾರ್ ರವರು ಸರ್ವೆ ನಂ.84 ರ 3 ಎಕರೆ 10 ಗುಂಟೆಗೆ ಸಂಬಂದ ಪಟ್ಟಂತೆ ಫಾರಂ ನಂ.10 ನ್ನು ಎಂ ಆರ್ ಸಂಖ್ಯೆ 27/85-86 ರಂತೆ ಪೆದಣ್ಣ ಬೋವಿ ಹೆಸರಿಗೆ ಖಾತೆ ಮಾಡಿರುತ್ತಾರೆ

ಎಂದರೆ ಸರಿಯಲ್ಲ. ಅದರಂತೆ ದಾವಾ ಆಸ್ತಿಯು ಪೆದ್ದಣ್ಣ ಬೋವಿರವರ ಹೆಸರಿಗೆ ಬದಲಾವಣೆ ಆಗಿ ದಾಖಲೆಗಳು ಕೂಡ ಆಗಿವೆ ಎಂದರೆ ಸರಿಯಲ್ಲ.

**7.** ಆ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ರಾಘವೇಂದ್ರ ರಾವ್ ರವರ ಹೇಳಿಕೆಯಂತೆ ಎಲ್ಲಾ ಆಸ್ತಿ ಕೂಡ ಗಂಗನಬೋವಿ ರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ತಹಸೀಲ್ದಾರ್ ರವರು ಖುದ್ದಾಗಿ ದಾವಾ ಆಸ್ತಿಯನ್ನು ಗಂಗನಬೋವಿ ಮತ್ತು ಅವರ ಮಕ್ಕಳು ಸ್ವಾದೀನದಲ್ಲಿದ್ದಾರೆ ಎಂದು ದೃಡೀಕರಿಸಿ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎನ್ನುತ್ತಾರೆ ಈಗಲೂ ಸಹ ದಾವಾ ಆಸ್ತಿ ಆದ ಸರ್ವೆ ನಂ.**84** ರ **3** ಎಕರೆ **10** ಗುಂಟೆ ಆಸ್ತಿಯನ್ನು ಪ್ರತಿವಾದಿಗಳು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಸ್ವಾದೀನದಲ್ಲಿದ್ದೇವೆ ಎನ್ನುತ್ತಾರೆ . ಮೇಲೆ ಹೇಳಿದ ಪ್ರಕ್ರಿಯೆ ಬಗ್ಗೆ ಎಲ್ಲಾ ಗೊತ್ತಿದ್ದರೂ ಸಹ ರಾಘವೇಂದ್ರ ರಾವ್ ರವರು ಕಂದಾಯ ಅದಿಕಾರಿಗಳೊಂದಿಗೆ ಸೇರಿಕೊಂಡು ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ತಮ್ಮ ಹೆಸರಿಗೆ ಸುಳ್ಳು ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ರಾಘವೇಂದ್ರ ರಾವ್ ರವರು ಪ್ರತಿವಾದಿಗಳಿಗೆ ಸೇರಿದ **3** ಎಕರೆ **10** ಗುಂಟೆಯನ್ನು ಸೇರಿಸಿ ಒಟ್ಟಾಗಿ **4** ಎಕರೆ **5** ಗುಂಟೆಯನ್ನು ಸಹ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**8.** ಸದರಿ ರಾಘವೇಂದ್ರ ರಾವ್ ರವರಿಗೆ **3** ಎಕರೆ **10** ಗುಂಟೆಯಲ್ಲಿ ಯಾವುದೇ ಹಕ್ಕು ಇಲ್ಲದ ಕಾರಣ ಅದನ್ನು ತಮ್ಮ ಹೆಸರಿಗೆ ಮಾಡಿಸಿಕೊಳ್ಳುವ ಯಾವುದೇ ಹಕ್ಕು ಕೂಡ ಇರಲಿಲ್ಲ ಎಂದರೆ ಸಾಕ್ಷಿಯು ಇಲ್ಲ ಮೊದಲು ರಾಘವೇಂದ್ರ ರಾವ್ ರವರಿಗೆ ಸೇರಿದ್ದು ಎನ್ನುತ್ತಾರೆ . ಸದರಿ ರಾಘವೇಂದ್ರ ರಾವ್ ರವರು ಮೇಲೆ ಹೇಳಿದ ಆಸ್ತಿಯಲ್ಲಿ ಯಾವುದೇ ಅದಿಕಾರ ಸ್ವಾದೀನ ಇಲ್ಲದೇ ಇದ್ದರೂ ಸಹ ಸುಳ್ಳಾಗಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ರಾಘವೇಂದ್ರ ರಾವ್ ರವರಿಗೆ **3** ಎಕರೆ **10** ಗುಂಟೆ ಬಗ್ಗೆ ಎಲ್ಲಾ ಗೊತ್ತಿದ್ದೂ ಸಹ ಸುಳ್ಳಾಗಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಾಘವೇಂದ್ರ ರಾವ್ ರವರು ಪ್ರತಿವಾದಿಗಳಿಗೆ ಗೊತ್ತಾಗದಂತೆ ಸರ್ವೆ ನಂ.**84** ರ ಪೂರ್ಣ ವಿಸ್ತೀರ್ಣವಾದ **4** ಎಕರೆ **5** ಗುಂಟೆಯನ್ನು ಅಕ್ರಮವಾಗಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ ಆ ಸಮಯದಲ್ಲಿ ರಾಘವೇಂದ್ರ ರಾವ್ ರವರಿಗೆ ಸದರಿ ಆಸ್ತಿಯನ್ನು ತಮ್ಮ ಹೆಸರಿಗೆ ಖಾತೆ ಮಾಡಿಕೊಳ್ಳುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ರಾಘವೇಂದ್ರ ರಾವ್ ರವರು ಮೇಲೆ ಹೇಳಿದ **3** ಎಕರೆ **10** ಗುಂಟೆ ಆಸ್ತಿಯನ್ನು ಯಾವತ್ತೂ ಸಹ ಸ್ವಾದೀನತೆ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

**9.** ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ನಂತರ ರಾಘವೇಂದ್ರ ರಾವ್ ಮತ್ತು ಅವರ ಮಕ್ಕಳು ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. **2022** ನೇ ಸಾಲಿನಲ್ಲಿ ಸದರಿ ದಾವಾ ಆಸ್ತಿಯನ್ನು ರಾಘವೇಂದ್ರ ರಾವ್ ಮತ್ತು ಮಕ್ಕಳು ನನಗೆ ಮಾರಾಟ ಮಾಡಿದ್ದು ನಿರ್ದಿಷ್ಟ ದಿನಾಂಕ ಹೇಳಲಾಗುವುದಿಲ್ಲ. ಸದರಿ ದಾವಾ ಆಸ್ತಿಯನ್ನು ರಾಘವೇಂದ್ರ ರಾವ್ ಮತ್ತು ಅವರ ಮಕ್ಕಳು ಅವರಿಗೆ ಯಾವುದೇ ಹಕ್ಕು ಸ್ವಾದೀನ ಇಲ್ಲದೇ ನನಗೆ ನಿಪಿ.**1** ರಂತೆ ಮಾರಾಟ ಮಾಡಿದ ಕಾರಣ ನನಗೂ ಸಹ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.**1** ದಾಖಲೆಯನ್ನು ನಾನು ರಾಘವೇಂದ್ರ ರಾವ್ ಮತ್ತು ಅವರ ಮಕ್ಕಳ ಜೊತೆ ಸೃಷ್ಟಿ ಮಾಡಿದ ಕಾರಣ ಅದು ಪ್ರತಿವಾದಿಗಳಿಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಯಾವತ್ತೂ ಸಹ ರಾಘವೇಂದ್ರ ರಾವ್ ಮತ್ತು ಅವರ ಮಕ್ಕಳಾದ ಕೆ ಆರ್ ವಾದಿರಾಜ್, ಕೆ ಆರ್ ಪಣೇಂದ್ರ ಮತ್ತು ಕೆ ಆರ್ ಪವನ್ ರವರು ಸ್ವಾದೀನತೆಯನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ನಿಪಿ.**1** ಕ್ಕೆ ಕಾನೂನು ರೀತ್ಯಾ ಮಾನ್ಯ ಇರುವುದಿಲ್ಲ ಮತ್ತು

ಅದರಂತೆ ನಾನು ದಾವಾ ಆಸ್ತಿಯಲ್ಲಿ ಯಾವುದೇ ಸ್ವಾಧೀನವನ್ನು ಸಹ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಸುಮಾರು 50 ವರ್ಷಗಳ ಹಿಂದೆ ಪ್ರತಿವಾದಿ ಗಳ ಕುಟುಂಬಕ್ಕೆ ದಾವಾ ಆಸ್ತಿಯನ್ನು ಮಂಜೂರು ಮಾಡಿದ ಕಾರಣ ನಿಪಿ.1 ರಂತೆ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. 2022 ನೇ ಸಾಲಿನಿಂದ ಇಲ್ಲಿಯವರೆಗೂ ನಾನು ನಿಪಿ.1 ರಂತೆ ದಾವಾ ಆಸ್ತಿಯ ಸ್ವಾಧೀನತೆಯನ್ನು ನಾನು ಹೇಳಿದಂತೆ ಹೊಂದಿಲ್ಲ ಎಂದರೆ ಸರಿಯಲ್ಲ.

**10.** ನನ್ನ ಪ್ರಕಾರ ದಾವಾ ಆಸ್ತಿಯ ಸ್ವಾಧೀನತೆಯನ್ನು ನಾನು ಹೊಂದಿದ್ದರೆ ಅದನ್ನು ತೋರಿಸಲು ತಹಸೀಲ್ದಾರ್ ರವರಿಂದ ಸ್ವಾಧೀನತೆಯ ಪ್ರಮಾಣ ಪತ್ರವನ್ನು ಇಲ್ಲಿಯವರೆಗೆ ಈ ದಾವೆಯಲ್ಲಿ ಹಾಜರುಪಡಿಸಿದ್ದೇನಾ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ಪಹಣಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ಸದರಿ ನಿಪಿ.1 ಮತ್ತು 2 ದಾಖಲೆಗಳನ್ನು ನಾನು ರಾಘವೇಂದ್ರ ರಾವ್ ರವರು ಸೃಷ್ಟಿ ಮಾಡಿದ ಸುಳ್ಳು ಖಾತೆಗೆ ಸಂಬಂದ ಪಟ್ಟಂತೆ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ಮತ್ತು 2 ದಾಖಲೆಗಳನ್ನು ಹೊರತುಪಡಿಸಿ ನಾನು ಹೇಳಿದಂತೆ ದಾವಾ ಆಸ್ತಿಯ ಸ್ವಾಧೀನತೆಯನ್ನು ತೋರಿಸುವ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಆದ ಕಾರಣ ನಾನು ದಾವಾ ಆಸ್ತಿಯ ಸ್ವಾಧೀನತೆಯನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಿಪಿ.1 ಕ್ಕೆ ಸಂಬಂದ ಪಟ್ಟಂತೆ ನಂತರ ಗೊತ್ತಾಗಿ ಕೋಲಾರ ಎಸಿ ನ್ಯಾಯಾಲಯದಲ್ಲಿ ಒಂದು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಇಲ್ಲಿಯವರೆಗೆ ಯಾವುದೇ ನೋಟೀಸ್ ಬಂದಿಲ್ಲ ಎನ್ನುತ್ತಾರೆ. ಸದರಿ ವಿಚಾರವನ್ನು ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದ ಖಂಡಿಕೆ27 ರಲ್ಲಿ ನಮೂದು ಮಾಡಿದ್ದು ಅದರ ಸಂಖ್ಯೆ ಆರ್ ಎ 244/2024 ಎಂದರೆ ನನಗೆ ಗೊತ್ತಿಲ್ಲ. ಸದರಿ ಎ ಸಿ ನ್ಯಾಯಾಲಯವು ಆ ಪ್ರಕರಣದಲ್ಲಿ ನಿರ್ಬಂದಕಾಜ್ಞೆ (Stay) ಕೂಡ ಹೊರಡಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**